
# ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಲನಗದ್ದೆ

ಕುಮಟಾ (ಉ.ಕ.)





## ಸಾಧನೆಯೆಡೆಗೆ................
## ನಮ್ಮ ನಡಿಗೆ



# ಅನುಬಂಧ – ಅ

## –: ಶಾಲೆಯ ಹೆಸರು :–

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಲನಗದ್ದೆ**

**ಕುಮಟಾ (ಉ.ಕ.)**

## –: ವಿಳಾಸ :–

**ಅಂಚೆ : ಹೊಲನಗದ್ದೆ, 581 351**

**ತಾ.: ಕುಮಟಾ, ಜಿಲ್ಲೆ : ಉತ್ತರಕನ್ನಡ**

## –: ಮುಖ್ಯ ಶಿಕ್ಷಕರ ಹೆಸರು :–

**ಶ್ರೀ ರವೀಂದ್ರ ಕೃಷ್ಣ ಭಟ್ಟ ಸೂರಿ**

**ಮೊಬೈಲ್ ನಂ. : 9448028443**

**E-mail : sooribhat3@gmail.com**

***

# ಶಾಲೆಯ ಭಾವಚಿತ್ರ ಹಾಗೂ ವಿವರಣೆ






*** ವರ್ಗದ ಕೊಠಡಿಗಳ ಸಂಖ್ಯೆ – 10, * ವಿಜ್ಞಾನ ಪ್ರಯೋಗಾಲಯ – 1, * ಸಭಾಭವನ – 1,**

*** ಗ್ರಂಥಾಲಯ – 1, * ಅಕ್ಷರ ದಾಸೋಹ ಕೊಠಡಿ – 1, * ಕಂಪ್ಯೂಟರ್ ಕೊಠಡಿ – 1,**

*** ಮುಖ್ಯಾಧ್ಯಾಪಕರ ಕೊಠಡಿ – 1, * ಶೌಚಾಲಯ – 4, * ಕ್ರೀಡಾಂಗಣ – 1**

# ಶಾಲೆಯ ಪ್ರಾರಂಭ ಮತ್ತು
# ಶಾಲೆಯ ಸರ್ವತೋಮುಖ ಬೆಳವಣಿಗೆ

ಕಡಲ ತಡಿಯಲ್ಲಿ ಹಸಿರು ಮಡಿಲಲ್ಲಿರುವ ಹೊಲನಗದ್ದೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ಶತಮಾನದ ಇತಿಹಾಸವಿದೆ. ಶಿಕ್ಷಣದ ಮಹತ್ವವನ್ನು ಅರಿತಿದ್ದ ಊರ ಹಿರಿಯರು ದೂರದೃಷ್ಟಿಯಿಂದ 17-07-1885 ರಲ್ಲಿ ಸ್ಥಾಪಿಸಿದ ಈ ಶಾಲೆಯಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಪಡೆದು ದೇಶ-ವಿದೇಶಗಳಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಶಾಲೆಯು ತನ್ನ ಸುವರ್ಣ ಸಂಭ್ರಮ, ಬೆಳ್ಳಿಹಬ್ಬ ಹಾಗೂ ಶತಮಾನೋತ್ಸವವನ್ನು ಊರ ನಾಗರಿಕರ ಸಹಕಾರದೊಂದಿಗೆ ಆಚರಿಸಿದ್ದು ಗಮನಾರ್ಹ.

ಪ್ರಸ್ತುತ ಶಾಲೆಯಲ್ಲಿ 146 ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದು ಬಹುತೇಕ ಬಡ ಮೀನುಗಾರ ಕುಟುಂಬದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕನ್ನಡ ಮತ್ತು ಆಂಗ್ಲ ಮಾಧ್ಯಮಗಳ ಒಟ್ಟು 12 ತರಗತಿಗಳು ನಡೆಯುತ್ತಿದ್ದು, 6 ಶಿಕ್ಷಕರು, 2 ಅತಿಥಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ವಿಶೇಷವೆಂದರೆ ಶಿಕ್ಷಕರ ಕೊರತೆಯನ್ನು ನೀಗಿಸುವ ದೃಷ್ಟಿಯಿಂದ ಹಾಗೂ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡುವ ದೃಷ್ಟಿಯಿಂದ ಗೌರವ ಶಿಕ್ಷಕರನ್ನು ಖಾಸಗಿಯಾಗಿ ನೇಮಿಸಿಕೊಳ್ಳಲಾಗಿದ್ದು, ಎಸ್.ಡಿ.ಎಮ್.ಸಿ.ಯಿಂದಲೇ ವೇತನ ಭರಿಸಲಾಗುತ್ತಿದೆ. ಶಾಲೆಯಲ್ಲಿ ಕಂಪ್ಯೂಟರ ಶಿಕ್ಷಣ, ಸ್ಪೋಕನ್ ಇಂಗ್ಲೀಷ್ ಹಾಗೂ ಯೋಗ ತರಬೇತಿಯನ್ನು ನೀಡಲಾಗುತ್ತಿದೆ.

ದಾನಿಗಳ ಸಹಕಾರದಿಂದ ಅಂದಾಜು ರೂ. 30 ಲಕ್ಷ್ಮ ಹೆಚ್ಚು ವೆಚ್ಚದಲ್ಲಿ ಶಾಲಾ ಅಭಿವೃದ್ಧಿ ಕಾರ್ಯಗಳನ್ನು ಹಾಗೂ ಮೂಲಭೂತ ಸೌಕರ್ಯಗಳನ್ನ ಒದಗಿಸುವ ಕೆಲಸ ನಿರ್ವಹಿಸಲಾಗಿದೆ. ನಾವಿನ್ಯಯುತ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಗಿದ್ದು ಮಾಸದ ಪ್ರತಿಭೆ, ತಿಂಗಳ ಹಕ್ಕಿಗಳ ಲೋಕ, ನಿತ್ಯ ನಿರಂತರ ಯೋಗ ತರಬೇತಿ, ಇಕೋ ಕ್ಲಬ್ ಮಾಸದ ಮಾತು ಮುಂತಾದ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಕಲಿಕೆಯ ಕುರಿತಾದ ಆಸಕ್ತಿಯನ್ನು ಮೂಡಿಸಲಾಗುತ್ತಿದೆ.


ಶಾಲೆಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು, ಅಳವಡಿಸಿಕೊಂಡ ನಾವಿನ್ಯಯುತ ಚಟುವಟಿಕೆಗಳು, ಇಲಾಖಾ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನ, ತಂತ್ರಜ್ಞಾನ ಆಧಾರಿತ ಬೋಧನಾ ಕಲಿಕಾ ಪ್ರಕ್ರಿಯೆ ಇವನ್ನೆಲ್ಲಾ ಪರಿಗಣಿಸಿ ಡಯಟ್ ಕುಮಟಾದಿಂದ ಸತತ 2 ವರ್ಷಗಳ ಕಾಲ "ಜಿಲ್ಲಾ ಉತ್ತಮ ಪ್ರಾಯೋಗಿಕ ಶಾಲೆ" ಪ್ರಶಸ್ತಿಯನ್ನು ಪಡೆದಿರುವುದು ಹೆಮ್ಮೆಯ ಸಂಗತಿ.

ಉತ್ತಮ ಕ್ರಿಯಾಶೀಲ ಶಿಕ್ಷಕ ವೃಂದವನ್ನು ಹೊಂದಿರುವ ಈ ಶಾಲೆಯ ಶಿಕ್ಷಕರಿಗೆ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಬಂದಿರುವುದು ಉಲ್ಲೇಖನಾರ್ಹ.

# ಮಕ್ಕಳಲ್ಲಿ ಬುನಾದಿ ಮತ್ತು ಸಂಖ್ಯಾ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಕಲಿಕಾ ಬೋಧನಾ ಚಟುವಟಿಕೆಗಳಲ್ಲಿ ಹಮ್ಮಿಕೊಂಡ ನಾವಿನ್ಯಯುತ ಚಟುವಟಿಕೆಗಳು











1. ಅಕ್ಷರ ಕಾರ್ಡುಗಳನ್ನು ಬಳಸಿ ಸರಳ ಪದಗಳ ರಚನೆ ಮಾಡುವುದು ಹಾಗೂ ಓದುವುದು.
2. ಚಿತ್ರಗಳನ್ನು ಗುರುತಿಸಿ ಪದಗಳನ್ನು ಬರೆಯುವುದು.
3. ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ವಾಕ್ಯ ರಚಿಸುವುದು ಹಾಗೂ ಓದುವುದು.
4. ವಾಚಕಗಳನ್ನು ಓದುವುದು.
5. ಉಕ್ತಲೇಖನ ಬರೆಯುವುದು.
6. ಸಂಖ್ಯಾ ಕಾರ್ಡುಗಳನ್ನು ಬಳಸಿ ಸಂಖ್ಯೆಗಳನ್ನು ಓದಿಸುವುದು ಮತ್ತು ಬರೆಸುವುದು..
7. ಸ್ಥಾನ ಬೆಲೆ ಕೋಷ್ಟಕ ಹಾಗೂ ಮಣಿ ಕಟ್ಟುಗಳನ್ನು ಬಳಸಿ ಸಂಖ್ಯೆಗಳ ಸ್ಥಾನ ಹಾಗೂ ಸ್ಥಾನಬೆಲೆ ಗುರುತಿಸುವುದು.
8. ಮಣಿಗಳು, ಬೀಜಗಳು, ಮಣಿಕಟ್ಟುಗಳನ್ನು ಬಳಸಿ ಸಂಕಲನ ಹಾಗೂ ವ್ಯವಕಲನದ ಲೆಕ್ಕಗಳನ್ನು ಬಿಡಿಸುವುದು.
9. ಅನೌಪಚಾರಿಕ ಹಾಗೂ ಔಪಚಾರಿಕ ಅಳತೆ ಮಾಪಕಗಳನ್ನು ಬಳಸಿ ನಿತ್ಯ ಜೀವನದ ಸಮಸ್ಯಾ ಲೆಕ್ಕಗಳನ್ನು ಬಿಡಿಸುವುದು.
10. ವಸ್ತುಗಳು ಹಾಗೂ ಗಣಿತ ಕಿಟ್ ಬಳಸಿ ಭಿನ್ನರಾಶಿಯ ಅಂಶ ಛೇದ, ಹೋಲಿಕೆ ಹಾಗೂ ಸಮಾನ ಭಿನ್ನರಾಶಿಗಳನ್ನು ಗುರುತಿಸುವುದು

# ಶಾಲೆಯ ಭೌತಿಕ ಪರಿಸರ, ಶಾಲಾ ಮೈದಾನ, ಕುಡಿಯುವ ನೀರು, ಶೌಚಾಲಯ ಇತರೇ ಸೌಲಭ್ಯಗಳ ಕುರಿತು ಮಾಹಿತಿ



















ಶಾಲೆಯು ಉತ್ತಮ ಭೌತಿಕ ಪರಿಸರವನ್ನು ಹೊಂದಿದ್ದು ಸ್ವಚ್ಛತೆಗೆ ಹೆಚ್ಚು ಮಹತ್ವವನ್ನು ನೀಡಲಾಗಿದೆ. ಶಾಲಾ ಮೈದಾನವನ್ನು ಪ್ರತಿನಿತ್ಯ ಸ್ವಚ್ಛಗೊಳಿಸಲಾಗುತ್ತಿದ್ದು ಹಸಿ ಕಸ, ಒಣ ಕಸಗಳ ವಿಂಗಡಣೆ ವ್ಯವಸ್ಥೆ ಮಾಡಲಾಗಿದೆ. ಹಸಿ ಕಸವನ್ನು ಪೈಪ್‌ನಲ್ಲಿ ಸಂಗ್ರಹಿಸಿ ನೈಸರ್ಗಿಕ ಗೊಬ್ಬರವನ್ನು ತಯಾರಿಸಿ ಶಾಲಾ ಕೈತೋಟಕ್ಕೆ ಬಳಸಲಾಗುತ್ತಿದೆ. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದ್ದು ವಾಟರ್ ಫೀಲ್ಟರ್‌ಗಳನ್ನು ಬಳಸಲಾಗುತ್ತಿದೆ.

ಗಂಡು ಹಾಗೂ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇದ್ದು ಹೆಣ್ಣು ಮಕ್ಕಳ ಶುಚಿ ಪ್ಯಾಡ್‌ಗಳನ್ನು ವಿಲೇವಾರಿ ಮಾಡಲು ಇನ್ಸಿನೇಟರ್ ವ್ಯವಸ್ಥೆ ಮಾಡಲಾಗಿದೆ. ಶೌಚಾಲಯವನ್ನು ಫಿನಾಯಿಲ್ ಬಳಸಿ ಪ್ರತಿನಿತ್ಯ ಸ್ವಚ್ಛಗೊಳಿಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಕೈ ತೊಳೆಯಲು 8 ನಲ್ಲಿಗಳ ವ್ಯವಸ್ಥೆ ಇದ್ದು ಲಿಕ್ವಿಡ್ ಸೋಪ್‌ನ್ನು ಒದಗಿಸಲಾಗುತ್ತಿದೆ.

# ನಾವಿನ್ಯಯುತವಾಗಿ ತರಗತಿ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿರುವ ಉಪಕ್ರಮಗಳು














ಆಕರ್ಷಣೀಯ ಕಲಿಕಾ ವಾತಾವರಣವನ್ನು ನಿರ್ಮಾಣ ಮಾಡುವ ಉದ್ದೇಶದಿಂದ ತರಗತಿ ಪ್ರಕ್ರಿಯೆಯಲ್ಲಿ ನಾವಿನ್ಯಯುತ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಶಾಲೆಯ 4 ತರಗತಿ ಕೊಠಡಿಗಳಿಗೆ ಸ್ಮಾರ್ಟ್ ಟಿವಿಯನ್ನು ಅಳವಡಿಸಲಾಗಿದ್ದು, ಪ್ರತಿಯೊಂದು ಪಾಠ ಬೋಧನೆಗೂ ಅದನ್ನು ಬಳಸಲಾಗುತ್ತಿದೆ. ಇದು ಮಕ್ಕಳ ಆಸಕ್ತಿದಾಯಕ ಕಲಿಕೆಗೆ ಸಹಕಾರಿಯಾಗಿದೆ.

ವಿಜ್ಞಾನ ಕಲಿಕೆ ಆಸಕ್ತಿದಾಯಕವಾಗುವಂತೆ ಮಾಡಲು ಸುಸಜ್ಜಿತ ವಿಜ್ಞಾನ ಪ್ರಯೋಗಾಲಯವನ್ನು ನಿರ್ಮಿಸಲಾಗಿದ್ದು ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ವಾರಕ್ಕೊಂದು ಸರಳ ಪ್ರಯೋಗ ಕಾರ್ಯಕ್ರಮವನ್ನು ಕೂಡ ಇಲ್ಲಿ ನಡೆಸಲಾಗುತ್ತಿದೆ.

ಇಂದಿನ ಆಧುನಿಕ ಯುಗಕ್ಕೆ ಮಕ್ಕಳನ್ನು ಸಜ್ಜುಗೊಳಿಸುವ ಉದ್ದೇಶದಿಂದ ಕಂಪ್ಯೂಟರ್ ಕಲಿಕೆಗೆ ಒತ್ತು ನೀಡಲಾಗಿದೆ. ಖಾಸಗಿಯಾಗಿ ಕಂಪ್ಯೂಟರ್ ಶಿಕ್ಷಕರೊಬ್ಬರನ್ನು ನೇಮಿಸಿಕೊಳ್ಳಲಾಗಿದ್ದು ಎಸ್.ಡಿ.ಎಮ್.ಸಿ. ವತಿಯಿಂದ ವೇತನ ನೀಡಲಾಗುತ್ತಿದೆ. ದಾನಿಗಳ ಸಹಾಯದಿಂದ 5 ಕಂಪ್ಯೂಟರ್‌ಗಳನ್ನು ಹಾಗೂ 1 ಪ್ರಿಂಟರ್‌ನ್ನು ಅಳವಡಿಸಲಾಗಿದ್ದು ವಿದ್ಯಾರ್ಥಿಗಳ ಕಲಿಕೆಗೆ ಹಾಗೂ ಶಾಲಾ ಆಡಳಿತ ನಿರ್ವಹಣೆಗೆ ಇದರಿಂದ ಅನುಕೂಲವಾಗಿದೆ.

ದಾನಿಗಳ ಸಹಾಯದಿಂದ ಸುಸಜ್ಜಿತ ವಾಚನಾಲಯವನ್ನು ನಿರ್ಮಿಸಲಾಗಿದ್ದು 10 ಸಾವಿರ ಪುಸ್ತಕಗಳಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ 4,200 ಪುಸ್ತಕಗಳು ಲಭ್ಯವಿದ್ದು ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿಯನ್ನು ಹೆಚ್ಚಿಸಲು ಪುಸ್ತಕವನ್ನು ಮನೆಗೆ ಕೊಡುವ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳೊಂದಿಗೆ ಶಿಕ್ಷಕರ ಜೋಳಿಗೆ ಅಭಿಯಾನವನ್ನು ಕೈಗೊಂಡು ಪಾಲಕರ ಮನೆಯಿಂದ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ.

***

# ವಿಶೇಷ ಚಟುವಟಿಕೆಗಳು/ಕಾರ್ಯಕ್ರಮಗಳು/ಸಾಧನೆಗಳ ವಿವರ.

## ಸಿ.ಎಸ್.ಆರ್. ಫಂಡ್, ಎಸ್.ಡಿ.ಎಮ್.ಸಿ.,

## ಇತರೇ ಅನುದಾನದಿಂದಾದ ಪ್ರಗತಿ ವರದಿಗಳು







ಮಾಸದ ಪ್ರತಿಭೆ
➢ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುವ ಪ್ರಯತ್ನ
➢ ಪ್ರತಿ ಮಕ್ಕಳಿಗೂ ವೇದಿಕೆಯಲ್ಲಿ ಅವಕಾಶ


ವಿದ್ಯಾರ್ಥಿಗಳಿಗೆ ಕೃಷಿ ಕಾರ್ಯದ ಪರಿಚಯ – ಅನುಭವದ ಕಲಿಕೆ


ಎಳೆಯಿಂದ ಬಟ್ಟೆ – ವಿಜ್ಞಾನ ಪ್ರಾಯೋಗಿಕ ಪಾಠ


ನಿತ್ಯ ನಿರಂತರ ಯೋಗ ತರಗತಿ


ತಿಂಗಳ ಪಕ್ಷಿಗಳ ಲೋಕ
➢ ತಿಂಗಳಿಗೊಂದು ಹೊಸ ಪಕ್ಷಿಯ ಪರಿಚಯ
➢ ಪಕ್ಷಿಗಳ ವೀಕ್ಷಣೆಗಾಗಿ ಹೊರ ಸಂಚಾರ


ಉಸಿರು ಇಕೋ ಕ್ಲಬ್ ವತಿಯಿಂದ ನಿರ್ವಾಣ ಬೀಚ್ ಸ್ವಚ್ಛತಾ ಕಾರ್ಯಕ್ರಮ

## ಮಾಸದ ಪ್ರತಿಭೆ



- ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುವ ಪ್ರಯತ್ನ
- ಪ್ರತಿ ಮಕ್ಕಳಿಗೂ ವೇದಿಕೆಯಲ್ಲಿ ಅವಕಾಶ



## ವಿದ್ಯಾರ್ಥಿಗಳಿಗೆ ಕೃಷಿ ಕಾರ್ಯದ ಪರಿಚಯ – ಅನುಭವದ ಕಲಿಕೆ





## ಎಳೆಯಿಂದ ಬಟ್ಟೆ – ವಿಜ್ಞಾನ ಪ್ರಾಯೋಗಿಕ ಪಾಠ





# ಸುಸಜ್ಜಿತ ವಿಜ್ಞಾನ ಪ್ರಯೋಗಾಲಯ







# ಪ್ರಯೋಗಾಲಯದ ವಿಶೇಷ



- ಸುಸಜ್ಜಿತ ಪ್ರಯೋಗಾಲಯ
- ಅವಶ್ಯಕ ರಾಸಾಯನಿಕಗಳು ಹಾಗೂ ಪ್ರಯೋಗ ಸಾಮಗ್ರಿಗಳ ಲಭ್ಯತೆ
- ಸಮುದಾಯದ ಸಹಕಾರ, ದಾನಿಗಳ ನೆರವಿನಿಂದ 2 ಲಕ್ಷ 80 ಸಾವಿರ ರೂ.ಗಳ ವೆಚ್ಚದಲ್ಲಿ ನಿರ್ಮಾಣ
- ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿಯೇ ಅತ್ಯುತ್ತಮ ವಿಜ್ಞಾನ ಪ್ರಯೋಗಾಲಯ ಎಂಬ ಹೆಗ್ಗಳಿಕೆ
- ಕ್ಲಸ್ಟರಿನ 9 ಶಾಲೆಗಳ ಮಕ್ಕಳಿಗೆ ಪ್ರಯೋಗಾಲಯದ ಉಪಯೋಗ
- ನಮ್ಮ ಶಾಲಾ ಚಟುವಟಿಕೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ನೋಡಿ ಪ್ರಯೋಗಾಲಯಕ್ಕೆ ಅಮೇರಿಕಾದ ಶಿಕ್ಷಣ ಪ್ರೇಮಿಗಳಿಂದ 59 ಸಾವಿರ ರೂಪಾಯಿಗಳ ನೆರವು.

## ಗಣಕಯಂತ್ರದ ಉಪಯೋಗ



- ನವೀಕೃತ ಕಂಪ್ಯೂಟರ್ ಕೊಠಡಿ
- ದಾನಿಗಳ ನೆರವಿನಿಂದ 2.75 ಲಕ್ಷ ರೂಪಾಂಯಿ ವೆಚ್ಚದಲ್ಲಿ ಸುಸಜ್ಜಿತ ಕಂಪ್ಯೂಟರ್ ಕೊಠಡಿ
- ಲಭ್ಯ ಕಂಪ್ಯೂಟರ್‌ಗಳು 5
- ಸಮುದಾಯದಿಂದ ಕಂಪ್ಯೂಟರ ಶಿಕ್ಷಕರ ನೇಮಕ 3000 ರೂ. ವೇತನ ಪಾವತಿ
- ಪ್ರತಿನಿತ್ಯ ಅಪರಾಹ್ನ ಅವಧಿಯಲ್ಲಿ ಕಂಪ್ಯೂಟರ್ ಕಲಿಕೆ





## ಸುಸಜ್ಜಿತ ವಾಚನಾಲಯ







- 
- ದಾನಿಗಳ ನೆರವಿನಿಂದ 3 ಲಕ್ಷ ರೂಪಾಂಯಿ ವೆಚ್ಚದಲ್ಲಿ ಸುಸಜ್ಜಿತ ಗ್ರಂಥಾಲಯ ನಿರ್ಮಾಣ
- ಅಂದಾಜು 10 ಸಾವಿರ ಪುಸ್ತಕಗಳಿಗೆ ಸ್ಥಳಾವಕಾಶ
- ಸಾರ್ವಜನಿಕರಿಗೆ ಉಚಿತ ಅವಕಾಶ
- 6 ಗ್ರಾನೈಟ್ ಟೇಬಲ್ ಹಾಗೂ 30 ಖುರ್ಚಿಗಳ ವ್ಯವಸ್ಥೆ
- ಜೋಳಿಗೆ ಅಭಿಯಾನ, ದಾನಿಗಳ ಮೂಲಕ ಪುಸ್ತಕ ಸಂಗ್ರಹ
- ಇನ್‌ಪೋಸಿಸ್ ಪೌಂಡೇಶನಗೆ ಪುಸ್ತಕ ಪೂರೈಸಲು ಮನವಿ


ಡಿಜಿಟಲ್ ಕ್ಲಾಸ್ ರೂಮ್ – 4 ರಿಂದ 7 ನೇ ತರಗತಿಯ ನಿರ್ವಹಣೆ
➢ 4-5ನೇ ತರಗತಿಯ ಮಕ್ಕಳಿಗೆ ಶುದ್ಧ ಬರಹಕ್ಕೆ ಸ್ಟಾರ್ ಹಾಕುವ ಮೂಲಕ ಹಾಗೂ ಹೆಚ್ಚು ಸ್ಟಾರ್ ಪಡೆದ ಮಕ್ಕಳಿಗೆ ವಾರ್ಷಿಕೋತ್ಸವದಲ್ಲಿ ಬಹುಮಾನ ನೀಡುವ ಮೂಲಕ ಪ್ರೋತ್ಸಾಹ
➢ ಡಿಜಿಟಲ್ ಕ್ಲಾಸ್ ರೂಂ. ನಲ್ಲಿ ವಿಶೇಷ ತರಗತಿ
➢ ಕಲಿಕಾ ಪ್ರಕ್ರಿಯೆಯಲ್ಲಿ ಸ್ಮಾರ್ಟ್ ಕ್ಲಾಸ್ ಬಳಕೆ

## ನಿಸರ್ಗ ನಡಿಗೆ





# ಸರಳ ಪ್ರಯೋಗ


ಹಲ್ಲು
ciliary muscle
lens
aqueous
humor
pupil
cornea


optic nerve
lens
blind spot
cornea
sclera
choroid coat
retina
Common Flower Parts
ಚರ್ಮ

## ನಿತ್ಯನಿರಂತರ ಯೋಗ ತರಗತಿ, ಪ್ರಾರ್ಥನೆ ಹಾಗೂ ಅಕ್ಷರ ದಾಸೋಹ ನಿರ್ವಹಣೆಗಾಗಿ ಸುಸಜ್ಜಿತ ಸಭಾಭವನ



**ಸಾಧನೆಗಳು :**

1. ನಿರಂತರ 2 ವರ್ಷ ಡಯಟ್ ಕುಮಟಾದಿಂದ ಕೊಡಮಾಡುವ ಜಿಲ್ಲಾ ಮಟ್ಟದ ಉತ್ತಮ ಪ್ರಾಯೋಗಿಕ ಶಾಲೆ ಪ್ರಶಸ್ತಿಗೆ ಭಾಜನವಾಗಿದೆ.
2. ಶಾಲೆಯ ಶಿಕ್ಷಕರಾದ ರವೀಂದ್ರ ಭಟ್ಟ ಸೂರಿಯವರಿಗೆ ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ದೊರಕಿದ್ದು ಮಂಗಲಾ ನಾಯ್ಕರವರಿಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ದೊರಕಿದೆ.
3. ವಿದ್ಯಾರ್ಥಿಗಳು ಕ್ರೀಡಾಕೂಟ ಹಾಗೂ ಪ್ರತಿಭಾ ಕಾರಂಜಿಯಲ್ಲಿ ಜಿಲ್ಲಾ ಮಟ್ಟದ ಸಾಧನೆ ಮಾಡಿದ್ದಾರೆ.
4. ಪ್ರಕೃತಿ ಪಾಠ, ನಿಸರ್ಗ ನಡಿಗೆ, ಮಾಸದ ಪ್ರತಿಭೆ, ನಿತ್ಯ ನಿರಂತರ ಯೋಗ ತರಗತಿ, ತಿಂಗಳ ಹಕ್ಕಿಗಳ ಲೋಕ, ಐತಿಹಾಸಿಕ ಸ್ಥಳಗಳ ಭೇಟಿ, ಇಕೋ ಕ್ಲಬ್, ಮಾಸದ ಮಾತು ಮುಂತಾದ ನಾವಿನ್ಯಯುತ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಗಿದೆ.
5. ಸಮುದಾಯದ ಸಹಕಾರದಿಂದ ಅಂದಾಜು 30 ಲಕ್ಷ ರೂಪಾಯಿಗಿಂತ ಹೆಚ್ಚು ಹಣದಿಂದ ಶಾಲಾಭಿವೃದ್ಧಿ ಕಾರ್ಯಗಳನ್ನು ನೆರವೇರಿಸಲಾಗಿದೆ.

**ಧನ್ಯವಾದಗಳು**